# ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾದಂಡಾಧಿಕಾರಿಗಳು, ಅಥಣಿ

---

**ಸಿ.ಸಿ.ನಂ : 32/2021** **ದಿನಾಂಕ : 27-12-2023**

**ಸಿ. ಡಬ್ಲೂ : 08**

**ಪಿ. ಡಬ್ಲೂ : 06**

---

| | |
|---|---|
| ಸಾಕ್ಷಿದಾರರ ಹೆಸರು | ಸಂಜಯ ಪೋಪಟ ಪಾಟೀಲ |
| ವಯಸ್ಸು | 33 ವರ್ಷ |
| ಉದ್ಯೋಗ | ಶೇತ್ಕಿ |
| ವಾಸಸ್ಥಳ | ಜಂಬಗಿ |
| ದಿನಾಂಕ | 27-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

---

* * *

<u>ಮುಖ್ಯ ವಿಚಾರಣೆ ಸ.ಸ.ಅ. ವಕೀಲರವರಿಂದಃ</u>

ನನಗೆ ಚಾಸಾ 1,7 ಮತ್ತು ಆರೋಪಿತರು ಪರಿಚಯ ಇರುವುದಿಲ್ಲ . ಈ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿನಾಂಕಃ 09-02-2020 ರಂದು ಮುಂಜಾನೆ 7.15 ಗಂಟೆಗೆ ಆರೋಪಿತರು ಅಕ್ರಮವಾಗಿ ಮರಳನ್ನು ಟಿಪ್ಪರ ವಾಹನದಲ್ಲಿ ತುಂಬಿಕೊಂಡು ಹೋಗುತ್ತಿದ್ದಾಗ, ಪೋಲಿಸರು ದಾಳಿ ಮಾಡಿದ್ದು ಆ ಕಾರಣ ಆರೋಪಿತರು ಸದರಿ ಮರಳನ್ನು ಕಿನಾಲ ದಂಡೆಯಲ್ಲಿ ಹಾಕಿ ಟಿಪ್ಪರನ್ನು ತೆಗೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನಂತರ ನೀವು ಮಧ್ಯಹ್ನ 3.00 ಗಂಟೆಗೆ , ಪೋಲಿಸರು ತಿಳಿಸಿದ ಮೇರೆಗೆ ಜೆ ಸಿ ಬಿ ಯಿಂದ ರೂ 18,000/- ಕಿಮ್ಮತ್ತಿನ 3 ಬ್ರಾಸ ಮರಳನ್ನು ನಿಮ್ಮ ಟಿಪ್ಪರದಲ್ಲಿ ತುಂಬಿಕೊಂಡು ಹೋಗಲು ಸಹಾಯ ಮಾಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಘಟನೆಯ ಕುರಿತು ನೀವು ಹೇಳಿಕೆ ನೀಡಿರುತ್ತೀರಿ ಎಂದರೆ

ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 11 ಎಂದು ಗುರುತಿಸಲಾಯಿತು. ನಿಮಗೆ ನಿಪಿ 11 ರ ವಿಷಯ ಗೊತ್ತಿದ್ದರೂ ಸಹ, ನೀವು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ